ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಹಣಕಾಸು

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ    ದಿನಾಂಕ : DATE : 30/07/2019

# 3 ತಿಂಗಳ ವಿತ್ತ ಮಸೂದೆ ಪಾಸ್

## ಬಳಿಕ ಹೊಸ ಬಜೆಟ್ಟೋ, ಲೇಖಾನುದಾನವೋ? | ಬಿಎಸ್‌ವೈ ನಡೆಯಿಂದ ಗರಿಗೆದರಿದೆ ಕುತೂಹಲ

30/7/19

**• ಕನ್ನಡಪ್ರಭ ವಾರ್ತೆ** ವಿಧಾನಸಭೆ

ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರ ನಿರೀಕ್ಷೆಯಂತೆ ಧನವಿನಿಯೋಗ ಮತ್ತು ಪೂರಕ ಅಂದಾಜುಗಳ ಮಸೂದೆಗಳನ್ನು ಸೋಮವಾರ ಮಂಡಿಸಿ ಅಂಗೀಕಾರ ಪಡೆದಿದೆ. ಬದಲಾದ ರಾಜಕೀಯ ಪರಿಸ್ಥಿತಿ ಹಿನ್ನೆಲೆಯಲ್ಲಿ ಮೊದಲ ಬಾರಿಗೆ ಮುಂದಿನ 3 ತಿಂಗಳಿಗೆ (ಆ.1ರಿಂದ ಅ.31ರವರೆಗೆ) ಅನ್ವಯವಾಗುವಂತೆ ಲೇಖಾನುದಾನಕ್ಕೆ ಒಪ್ಪಿಗೆ ಪಡೆಯಲಾಗಿದ್ದು, ಈ ಅವಧಿಯ ತರುವಾಯ ಹೊಸದಾಗಿ ಬಜೆಟ್ ಮಂಡಿಸಲಾಗುತ್ತದೋ ಅಥವಾ ವಿತ್ತೀಯ ವರ್ಷದ ಮಟ್ಟಿಗೆ ಮತ್ತೊಂದು ಲೇಖಾನುದಾನ ಮಂಡಿಸಲಾಗುತ್ತೋ ಎಂಬುದು ಕುತೂಹಲಕಾರಿಯಾಗಿದೆ.

ಸರ್ಕಾರಿ ವ್ಯವಸ್ಥೆ ಆ.1ರಿಂದ ಸುಲಲಿತವಾಗಿ ಮುಂದುವರಿಯಲು ಜು.31ರೊಳಗೆ ಲೇಖಾನುದಾನಕ್ಕೆ ಅಂಗೀಕಾರ ಪಡೆಯುವುದು ಅತ್ಯಂತ ಅನಿವಾರ್ಯವಾಗಿತ್ತು. ಅದರಂತೆ, ಸೋಮವಾರ ಯಡಿಯೂರಪ್ಪ ನೇತೃತ್ವದ ಸರ್ಕಾರ 2019-20ನೇ ಸಾಲಿನ ಹಣಕಾಸು ವರ್ಷಕ್ಕಾಗಿ 62,751 ಕೋಟಿ ರು. ಮೊತ್ತದ ಕರ್ನಾಟಕ ಧನವಿನಿಯೋಗ-2019 ಮತ್ತು 3327.85 ಕೋಟಿ ರು.ಗಳ ಪೂರಕ ಅಂದಾಜುಗಳ (ಮೊದಲ ಕಂತು) ಮೊತ್ತಕ್ಕೆ ಅಂಗೀಕಾರ ಪಡೆದಿದೆ. ವಿಧಾನಸಭೆಯಲ್ಲಿ ಯಾವುದೇ ಚರ್ಚೆ ಇಲ್ಲದೆ ಈ ಮಸೂದೆಗಳು ಅಂಗೀಕಾರಗೊಂಡಿವೆ. ತನ್ಮೂಲಕ ರಾಜಕೀಯ ಗೊಂದಲದ ಪರಿಣಾಮವಾಗಿ ಹುಟ್ಟಿಕೊಂಡಿದ್ದ ಆರ್ಥಿಕ ಅರಾಜಕತೆಯ ಭೀತಿ ರಾಜ್ಯಕ್ಕೆ ತಪ್ಪಿದಂತೆ ಆಗಿದೆ.

## ಚರ್ಚೆ ಇಲ್ಲದೇ ಮಸೂದೆ ಅಂಗೀಕಾರ ಬೇಡ: ಸಿದ್ದು

ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಪೂರಕ ಅಂದಾಜುಗಳ ಬಗ್ಗೆ ಚರ್ಚೆ ಮಾಡದೇ ಒಪ್ಪಿಗೆ ನೀಡುವುದು ಸರಿಯಲ್ಲ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದರು. ಈ ವೇಳೆ, ಎಚ್.ಕೆ. ಪಾಟೀಲ್ ಕೂಡ ಇಷ್ಟೊಂದು ದೊಡ್ಡ ಮೊತ್ತದ ಬೇಡಿಕೆಗಳ ಮೇಲೆ ಚರ್ಚಿಸದೇ ಒಪ್ಪಿಗೆ ನೀಡುವುದು ರಾಜ್ಯದ ಇತಿಹಾಸಕ್ಕೆ ಕಪ್ಪು ಚುಕ್ಕೆ ಎಂದರು.

ಆದರೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮೈತ್ರಿ ಸರ್ಕಾರ ಸಿದ್ಧಪಡಿಸಿದ ಪೂರಕ ಅಂದಾಜಿನಲ್ಲಿ ತಾವು ಒಂದೇ ಒಂದು ಅಕ್ಷರ ಬದಲಾಯಿಸಿಲ್ಲ, ಹಾಗಾಗಿ ಒಪ್ಪಿಗೆ ನೀಡಬೇಕೆಂದು ಮನವಿ ಮಾಡಿದರು. ಇದಕ್ಕೆ ಸಭಾಧ್ಯಕ್ಷ ಕೆ.ಆರ್.ರಮೇಶಕುಮಾರ್ ಅವರು ಸಹಮತ ವ್ಯಕ್ತಪಡಿಸಿದರು. ಅಲ್ಲದೆ, ತಾವು ಅಗಲಿದ ಕೇಂದ್ರದ ಮಾಜಿ ಸಚಿವ ಜೈಪಾಲರೆಡ್ಡಿ ಅಂತ್ಯ ಸಂಸ್ಕಾರಕ್ಕೆ ಹೈದರಾಬಾದ್‌ಗೆ ತೆರಳಬೇಕಿರುವುದರಿಂದ ಚರ್ಚೆ ಬೇಡ ಎಂದು ಮನವಿ ಮಾಡಿಕೊಂಡರು. ಬಿಜೆಪಿಯ ಮಾಧುಸ್ವಾಮಿ ಅವರು ಅಂಗೀಕಾರ ನೀಡದಿದ್ದರೆ ಕೇಂದ್ರ ಸರ್ಕಾರದಿಂದ ಪ್ರಕೃತಿ ವಿಕೋಪ ಹಾಗೂ ಬರ ಪರಿಹಾರಕ್ಕೆ ಬಂದಿರುವ ಹಣ ವೆಚ್ಚ ಮಾಡಲು ಆಗುವುದಿಲ್ಲ, ಹಾಗಾಗಿ ಒಪ್ಪಿಗೆ ನೀಡಿ ಎಂದು ಮನವಿ ಮಾಡಿದರು. ಇದೇ ವೇಳೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೂರು ತಿಂಗಳಿಗೆ ಲೇಖಾನುದಾನ ಮಂಡಿಸುವುದು ಒಳ್ಳೆಯ ಪದ್ಧತಿ ಆಗುವುದಿಲ್ಲ. ಎಂಟು ತಿಂಗಳಿಗೆ ಅನ್ವಯವಾಗುವಂತೆ ಒಪ್ಪಿಗೆ ಪಡೆಯಿರಿ ಎಂದು ಮನವಿ ಮಾಡಿದರು.

**ಪೂರಕ ಅಂದಾಜು ಮಂಡನೆ;** ಬಜೆಟ್ ಮಂಡಿಸಿದ ನಂತರದ ಅವಧಿಯಲ್ಲಿ ನಿರ್ದಿಷ್ಟ ಸೇವೆಗೆ ನೀಡಿದ ಮೊತ್ತ ಸಾಕಾಗದಿದ್ದರೆ ಅಥವಾ ಹೊಸ ಸೇವೆಗಾಗಿ ಹೆಚ್ಚಿನ ಮೊತ್ತದ ಅವಶ್ಯಕತೆ ಉಂಟಾದ ಸಂದರ್ಭದಲ್ಲಿ ಹೆಚ್ಚುವರಿಯಾಗಿ ಖರ್ಚು ಮಾಡಲು ಮಂಡಿಸಿದ ಪೂರಕ ಅಂದಾಜುಗಳ ಒಟ್ಟಾರೆ ಮೊತ್ತ 3327.85 ಕೋಟಿ ರು.ಗಳಾಗಿದೆ.

ಪ್ರಮುಖವಾಗಿ ಕಂದಾಯ ಇಲಾಖೆಗೆ 1912.13 ಕೋಟಿ ರು., ಒಳಾಡಳಿತ ಮತ್ತು ಸಾರಿಗೆ ಇಲಾಖೆಗೆ 301.41 ಕೋಟಿ ರು., ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ 300 ಕೋಟಿ ರು., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ 129.71 ಕೋಟಿ ರು., ಕಾರ್ಮಿಕ ಮತ್ತು ಕೌಶಲ್ಯ ಅಭಿವೃದ್ಧಿ ಇಲಾಖೆಗೆ 108.55 ಕೋಟಿ ರು., ಪಶು ಸಂಗೋಪನೆ ಮತ್ತು ಮೀನುಗಾರಿಕೆಗೆ 71.01 ಕೋಟಿ ರು. ನೀಡಲಾಗಿದೆ.

ಒಳಾಡಳಿತ ಮತ್ತು ಸಾರಿಗೆ ಇಲಾಖೆಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಅನುದಾನಕ್ಕೆ ರಾಜ್ಯದ ಪಾಲು 278.76 ಲಕ್ಷ ರು. ಸೇರಿಸಿ ಸೇಫ್ ಸಿಟಿ ಯೋಜನೆ (ನಿರ್ಭಯ ನಿಧಿ) ಅನುಷ್ಠಾನ ಮಾಡಲು ನೀಡಲಾಗಿದೆ. ಇದೇ ಯೋಜನೆಯಡಿ ಬಿಎಂಟಿಸಿ ಬಸ್‌ಗಳಲ್ಲಿ ಸಿಸಿಟಿವಿ ಅಳವಡಿಸಲು ಕೇಂದ್ರ ಬಿಡುಗಡೆ ಮಾಡಿದ ಮೊತ್ತಕ್ಕೆ ರಾಜ್ಯದ ಪಾಲು 22.43 ಕೋಟಿ ರು. ಸೇರಿಸಲಾಗಿದೆ. ರಾಜ್ಯದ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ 300 ಕೋಟಿ ರು.ಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗಿದೆ.